# ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾದೀಶರ ನ್ಯಾಯಾಲಯ ಯಾದಗಿರಿ.

## ಸಿ.ಸಿ. ನಂಃ **1916/2022**

ಫಿರ್ಯಾಧಿಕಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ ಅಬಕಾರಿ ಪೊಲೀಸ್ ಇಲಾಖೆ

// ವಿರುದ್ಧ //

ಆರೋಪಿ ಃ ರಾಘವರೆಡ್ಡಿ ತಂದೆ ಸಾಯಿರೆಡ್ಡಿ ಕಲವಾಲ್,
ವಃ **48** ವರ್ಷ, ಸಾಃ ನಸಲವಾಯಿ ಗ್ರಾಮ,
ತಾಃ ಗುರುಮಠಕಲ್, ಜಿಃ ಯಾದಗಿರಿ.

<u>ದೋಷಾರೋಪಣೆ</u>

ನಾನು ಶ್ರೀ. ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರು ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ 15.07.2022 ರಂದು ಸಂಜೆ 06.00 ಗಂಟೆಗೆ ಅಬಕಾರಿ ಉಪ-ನೀರಿಕ್ಷಕರು ತಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ಖಚಿತ ಬಾತ್ಮೀಯ ಮೇರೆಗೆ ಗುರುಮಿಠಕಲ್ ತಾಲ್ಲೂಕಿನ ನಸಲವಾಯಿ ಗ್ರಾಮದ ಆರೋಪಿತರಾದ ನಿಮ್ಮ ಅಂಗಡಿಯ ಮೇಲೆ ದಾಳಿ ಮಾಡಿದಾಗ ನೀವು ಅಂಗಡಿಯಲ್ಲಿ ಆಕ್ರಮವಾಗಿ ತೆಲಂಗಾಣ ರಾಜ್ಯದಲ್ಲಿ ಮಾತ್ರ ಮಾರಾಟಕ್ಕಿರುವ 650 ಎಮ್.ಎಲ್.ನ 07 ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರ, 180 ಎಂ.ಎಲ್ ನ ಐ.ಬಿ ವಿಸ್ಕಿಯ 02 ಬಾಟಲಿಗಳು ಹಾಗೂ 02 ರಟ್ಟಿನ ಬಾಕ್ಸಗಳಲ್ಲಿ 90 ಎಂಎಲ್ ಓರಿಜಿನಲ್ ಚಾಯ್ಸ್ ವಿಸ್ಕಿಯ 192 ಟೆಟ್ರಾ ಪ್ಯಾಕೆಟಗಳ ಮದ್ಯ ಮಾರಾಟದ ಉದ್ದೇಶದಿಂದ ಸಂಗ್ರಹಸಿಟ್ಟಿದ್ದು ಕಂಡುಬಂದಿದ್ದು, ಈ ಮೂಲಕ ಆರೋಪಿತನಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಪ್ರಶ್ನೆ-1ಃ ಮೇಲೆ ಓದಿ ಹೇಳಿದ ಆಪಾದನೆ/ದೋಷಾರೋಪಣೆ ತಿಳಿಯಿತೆ ಅಥವಾ ಅರ್ಥವಾಯಿತೇ?

ಉತ್ತರಃ

ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?

ಉತ್ತರಃ

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ದಿನಾಂಕಃ 12.08.2024 ರಂದು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)

ದಿನಾಂಕಃ 12.08.2024

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.